**ತಾ:23.09.2024 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್ ಎಸ್ ವಕೀಲರಿಂದಃ**

5. ಸರ್ವೆ ನಂಬರ್ 171 ಕ್ಕೆ ಸಂಬಂಧಪಟ್ಟಂತೆ ವಿವಾದ ಇತ್ತು ಎಂದರೆ ಸರಿ. ಆ ವಿವಾದಕ್ಕೆ ಸಂಬಂಧಪಟ್ಟಂತೆ ಹೊಸಕೋಟೆ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಲಾಗಿತ್ತು ಎಂದರೆ ಸರಿ. ಈ ಪ್ರಕರಣದಲ್ಲಿ ರಾಜಿ ಪಂಚಾಯತಿ ಮಾಡಿದಾಗ ನ್ಯಾಯಾಲಯವು ಸಿವಿಲ್ ದಾವೆ ಹೂಡಬೇಕು ಎಂದು ಹೇಳಿದ್ದರಿಂದ ಸಿವಿಲ್ ದಾವೆಯನ್ನು ಹಾಕಲಾಗಿತ್ತು ಎಂದರೆ ಸರಿ. ಆ ಸಿವಿಲ್ ದಾವೆಯಲ್ಲಿ 1, 2, 5 ರಿಂದ 7 ನೇ ಆರೋಪಿತರು ಇದ್ದರು ಎಂದರೆ ಸರಿ. ಸದರಿ ಸಿವಿಲ್ ದಾವೆ ರಾಜಿ ಆಗಿ ಇತ್ಯರ್ಥ ಆಗಿರುತ್ತದೆ ಎಂದರೆ ಸರಿ. ಸಿವಿಲ್ ದಾವೆ ರಾಜಿಯಾಗಿರುವುದರಿಂದ ಈ ಪ್ರಕರಣವನ್ನು ರಾಜಿ ಮಾಡಿಕೊಳ್ಳುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಈಗ ಆರೋಪಿತರ ವಿರುದ್ಧ ಯಾವುದೇ ವಿವಾದ ಇಲ್ಲ ಎಂದರೆ ಸರಿ. ಸರ್ವೆ ನಂಬರ್ 171 ಕ್ಕೆ ಸಂಬಂಧಪಟ್ಟಂತೆ ಈಗ ಯಾವುದೇ ವಿವಾದ ಇಲ್ಲ ಎಂದರೆ ಸರಿ. ನನ್ನ ಪಾಡಿಗೆ ನಾನು ಮತ್ತು ಆರೋಪಿತರ ಪಾಡಿಗೆ ಅವರು ಇರುತ್ತಿದ್ದೇವೆ ಎಂದರೆ ಸರಿ. ಸಿವಿಲ್ ದಾವೆಯಲ್ಲಿ ಆದ ರಾಜಿ ಪಂಚಾಯತಿಯಲ್ಲಿ ನಾನು ಆರೋಪಿತರನ್ನು ಕ್ಷಮಿಸಿರುತ್ತೇನೆ ಹಾಗೂ ಆರೋಪಿತರು ನನ್ನನ್ನು ಕ್ಷಮಿಸಿರುತ್ತಾರೆ ಎಂದರೆ ಸರಿ. ನಾನು ಈ ಹಿಂದೆ ನೀಡಿದ ಸಾಕ್ಷಿಯ ನಂತರ ರಾಜಿಯಾಗಿರುತ್ತೇನೆ ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ ಆರೋಪಿತರಿಗೆ ಶಿಕ್ಷೆ ಆಗಬೇಕು ಎನ್ನುವ ಮನಸ್ಸು ಇಲ್ಲ ಎಂದರೆ ಸರಿ.

ನಾನು ಈ ಹಿಂದೆ ಹೇಳಿದ ಸಾಕ್ಷಿಯು ಸಿವಿಲ್ ದಾವೆಯಲ್ಲಿ ರಾಜಿಯಾಗಿರುತ್ತದೆ ಎಂದರೆ ಸರಿ. ನನಗೆ ಈ ಹಿಂದೆ ಗಾಯಗಳು ಆಗಿವೆ ಎಂದು ಹೇಳಿದ ಸಂಬಂಧ ನನಗೆ ಸಿವಿಲ್ ದಾವೆಯಲ್ಲಿ ಪರಿಹಾರ ಸಿಕ್ಕಿದೆ ಎಂದರೆ ಸರಿ. ಆದ್ದರಿಂದ ನಾನು ಈ ಪ್ರಕರಣವನ್ನು ಮುಂದುವರೆಸಲು ಇಚ್ಛಿಸಿಲ್ಲ ಎಂದರೆ ಸರಿ. ರಸ್ತೆ ವಿವಾದ, ದಾರಿ ವಿವಾದ ಮತ್ತು ಕಂಪೌಂಡ್ ವಿವಾದ ಸಿವಿಲ್ ದಾವೆಯಲ್ಲಿ ಬಗೆಹರಿದಿದೆ ಎಂದರೆ ಸರಿ. ನಾನು ಈ ಹಿಂದೆ ನೀಡಿದ ಸಾಕ್ಷಿ ಸರಿಯಿಲ್ಲ ಎಂದರೆ ಸರಿ.

**ಮರುವಿಚಾರಣೆ ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**

**ಮರು ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

6. ಈ ಹಿಂದೆ ನಾನು ಸಾಕ್ಷಿ ನುಡಿಯಲು ನನಗೆ ಯಾರು ಒತ್ತಾಯ ಮಾಡಿರುವುದಿಲ್ಲ. ಈ ಹಿಂದೆ ನಡೆದ ಘಟನೆಯನ್ನು ನಾನು ನನ್ನ ಹಿಂದಿನ ಸಾಕ್ಷಿಯಲ್ಲಿ ಸ್ವಖುಷಿಯಿಂದ ಹೇಳಿರುತ್ತೇನೆ. ನಾನು ಈ ಹಿಂದೆ ನೀಡಿದ ಸಾಕ್ಷಿ ಸರಿಯಾಗಿದ್ದು ಪಾಟೀ ಸವಾಲಿನಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಬಾರದು ಎಂಬ ಅರಿವು ನನಗೆ ಇದೆ ಎಂದರೆ ಸರಿ. ಒಂದು ವೇಳೆ ಸುಳ್ಳು ಸಾಕ್ಷಿ ಹೇಳಿದರೆ ಶಿಕ್ಷೆ ಆಗುತ್ತದೆ ಎಂದರೆ ಸರಿ.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಶಿಲ್ಪಾ ಕೆ.ಎಸ್.,)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.